(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿಬಿಐ ತನಿಖೆ ಮಾಡಿ ನೀವು ಹೇಳಿ ನಾವು ಒಪ್ಪಿಕೊಂಡು ಮನೆಗೆ ಹೋಗತ್ತೇವೆ.

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀವು ಸ್ಪಷ್ಟೀಕರಣ ಕೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪಷ್ಟೀಕರಣ ಕೇಳಲು ಬಿಟ್ಟರೆ ತಾನೇ?

ಶ್ರೀ ಕೆ.ಎಸ್. ಈಶ್ವರಪ್ಪ (ಬಾಯಿಂದ) : ಮಾತನಾಡುತ್ತಿದ್ದರು.

ಅಧ್ಯಕ್ಷರು : ನಾನು ನಿಮಗೆ ಕೇಳುತ್ತಿಲ್ಲ. You cannot talk from there. You cannot talk kuLitukoLLi. What is this? Is that the way you seek clarification?

(ಇದೇ ಹಂತದಲ್ಲಿ ಪಕ್ಷೇತರರ ಸದಸ್ಯರೀದ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(INTERRUPTIONS)

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ಬಾವಿ ಕಡೆಗೆ ಬಂದರು)

(ಗೊಂದಲ)

MR. SPEAKER : I adjourn the House.

(The House was adjourned at 6.45 p.m.)

(ಸಭೆಯ ಪುನಃ 7.18 ನಿಮಿಷಕ್ಕೆ ಸಮಾವೇಶಗೊಂಡಿತು).

(ಶ್ರೀ ರಮೇಶ್ ಕುಮಾರ್ : ಅಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದರು)

+ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಕ್ಷಮಿಸಬೇಕು ತಮ್ಮ ಮನಸ್ಸಿಗೂ ಕೂಡ ನೋವಾಗಿರತಕ್ಕದ್ದು ಸದನದಲ್ಲಿ ನಮಗೆಲ್ಲರಿಗೂ ಕೂಡ ಆಗಿದೆ. ವಾಸುದೇವನ್‌ರವರ ಬಗ್ಗೆ ಅನುಕಂಪದ ಬಗ್ಗೆ ಅಲೆ ಈ ಸದನದ ಎಲ್ಲಾ ಮೂಲೆಯಲ್ಲಿ ಕೂಡ ಇರತಕ್ಕದ್ದು ಮೆಚ್ಚತಕ್ಕ ಬೆಳವಣಿಗೆಯೂ ಕೂಡ ಹೌದು. ಏನೇ ಇದ್ದರೂ ಕೂಡ ನ್ಯಾಯಾಲಯದ ಒಂದು ಆದೇಶಕ್ಕೆ ಗೌರವನ್ನು ಕೊಡತಕ್ಕ ಉದ್ದೇಶ ರಾಜ್ಯಸರ್ಕಾರಕ್ಕೆ ಇರತಕ್ಕದ್ದು ಮತ್ತು ಅಧಿಕಾರಿಯ ವರ್ತನೆಯನ್ನು ಕೂಡ ನಾವು ಮೆಚ್ಚತಕ್ಕ ವಿಚಾರ. ನಾನು ಅಷ್ಟಕ್ಕೆ ಆ ವಿಚಾರವನ್ನು ನಿಲ್ಲಿಸುತ್ತೇನೆ. ವಿಷಯ ಪ್ರಸ್ತಾಪ ಇವತ್ತು ಏನಾಗಿದೆ, ಯಾರೇ ಮಾಡಿರಬಹುದು ನಿಲುವಳಿ ಸೂಚನೆ ಇತ್ಯಾದಿ ವಗೈರೆ, ವಗೈರೆ, ಈಗಾಗಲೇ ಉತ್ತರಗಳು ಕೇಳಿದ ಮೇಲೆ ರಿಟರ್ನ್‌ಸ್ಟೇಟಮೆಂಟ್ ಕೂಡ ನೋಡಿದ್ದೇವೆ. ಸರ್ಕಾರ ನಡೆಸಿರತಕ್ಕವರು ಅಲ್ಲಿಯೂ ಇದ್ದಾರೆ